ಉತ್ಕೃಷ್ಟ ಸ್ಥಾನವನ್ನು ಅಲಂಕರಿಸುತ್ತವೆ ಎಂಬುದು ನನ್ನ ಅನಿಸಿಕೆ. ನೀವು ಇದನ್ನು ತಾಯಿ ಭಾವ ಎಂತಲಾದರೂ ಕರೆಯಿರಿ ಅಥವಾ ಅಹಂಕಾರ ಎಂತಲಾದರೂ ಹೆಸರಿಡಿ.

'ದೇವರು ಮತ್ತು ಅಪಘಾತ' ಎಂಬ ನನ್ನದೊಂದು ಕತೆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದಾದ ಒಂದು ವಾರದ ನಂತರ ನಾನು ಹಾಸನದ ಯಾವುದೋ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಕಾರ್ಯಕ್ರಮ ಮುಗಿದ ನಂತರ ನಾನು ಮನೆಗೆ ಹೋಗಲೆಂದು ಹೊರಟಿದ್ದೆ. ಅಷ್ಟರಲ್ಲೇ ಒಬ್ಬ ಮಹಿಳೆ ಬಂದು ನನ್ನನ್ನು ಬಿಗಿದಪ್ಪಿ ಕಾಲಿಗೆ ಬಿದ್ದಳು. ನಾನು ಆ ಆಚರಣೆಯ ವಿರೋಧಿ, ನಾನು ಆಕೆಯನ್ನು ಹಿಡಿದೆತ್ತಿ ಆಕೆಯ ಮೇಲೆ ಜೋರು ಮಾಡಬೇಕು ಎನ್ನುವಷ್ಟರಲ್ಲಿ ಆಕೆ ಅತ್ಯಂತ ದಯನೀಯವಾಗಿ ಅಳಲಾರಂಭಿಸಿದಳು. ಮತ್ತು ಹೇಳಿದಳು 'ಮೇಡಮ್, ಮೂರು ದಿನಗಳ ಹಿಂದೆ ನನ್ನ ಗಂಡ ತೀರಿಹೋದರು. ಅವರು ಕಾಯಿಲೆಯಾಗಿ ಆಸ್ಪತ್ರೆಯಲ್ಲಿದ್ದರು. ನಾನು ಪತ್ರಿಕೆಯನ್ನು ಕೊಂಡಿದ್ದೆ ಆದರೆ ಓದಿರಲಿಲ್ಲ. ನಮ್ಮ ಯಜಮಾನರ ಶವವನ್ನು ಮಾರ್ಚುರಿಯಲ್ಲಿಟ್ಟರು. ನನ್ನ ಜೊತೆಯಲ್ಲಿ ಯಾರೂ ಇರಲಿಲ್ಲ. ನನಗೆ ತುಂಬ ಭಯವಾಗಿ ಪತ್ರಿಕೆಯನ್ನು ತೆರೆದೆ. ಅದರಲ್ಲಿ ನಿಮ್ಮ ಕತೆ ಇತ್ತು. ಒಂದಕ್ಷರವನ್ನೂ. ಬಿಡದೆ ಪೂರ್ತಾ ಓದಿದೆ. ನನ್ನ ಜೊತೆಯಲ್ಲಿಯೇ ನನ್ನ ಪಕ್ಕದಲ್ಲೇ ನೀವಿದ್ದೀರಿ ಅಂತ ನನಗೆ ಅನ್ನಿಸಲಾರಂಭಿಸಿತು. ಆಮೇಲೆ ಅವರು ಇವರು ಬಂದರು. ಐದು ಗಂಟೆಗಳ ಕಾಲ ನಾನು ಅಲ್ಲಿದ್ದೆ. ಅಂತಹ ಹೊತ್ತಿನಲ್ಲಿ ನನ್ನ ಸಂಕಟದಲ್ಲಿ ನನ್ನ ಕೈ ಹಿಡಿದುಕೊಂಡು ನೀವು ಜೊತೆ ಇದ್ದಿರಿ. ಅದಕ್ಕೆ ಕಾರ್ಯ ಮುಗಿದ ತಕ್ಷಣ ನಿಮ್ಮನ್ನು ನೋಡಬೇಕೆನಿಸಿತು. ಆಪತ್ಕಾಲದಲ್ಲಿ ನನ್ನ ಕೈಹಿಡಿದು ನನ್ನ ಜೊತೆಗಿದ್ದ ನಿಮ್ಮ ಕಾಲಿಗೆ ನಮಸ್ಕರಿಸಬೇಕು ಅನಿಸಿತು' ಅಂದಳು. ಅದು ಅವಳ ಭಾವಲೋಕದ ಅನಿಸಿಕೆ. ನನ್ನ ಕಣ್ಣಾಲಿಗಳು ತುಂಬಿ ಬಂದವು. ನಾನೇನೂ ಉತ್ತರಿಸಲಿಲ್ಲ.

ಇನ್ನೊಂದು ಸಂದರ್ಭದಲ್ಲಿ ಮುಸ್ಲಿಂ ಯುವ ದಂಪತಿಯ ನಡುವೆ ವ್ಯಾಜ್ಯ ನಡೆದಿತ್ತು. ನಾನು ಅವರಿಬ್ಬರ ನಡುವೆ ಮಧ್ಯಸ್ಥಗಾರಳಾಗಿ ನೇಮಕಗೊಂಡಿದ್ದೆ. ಪತಿ ಉನ್ನತ ಸ್ಥಾನದಲ್ಲಿದ್ದ ಮತ್ತು ಸ್ಫುರದ್ರೂಪಿಯಾಗಿದ್ದ. ನಾನು ಆತನನ್ನು ಹೊರಗೆ ಕಳುಹಿಸಿ ಪತ್ನಿಯೊಡನೆ ಅವಳ ವೈವಾಹಿಕ ತೀರ್ಮಾನದ ಸಾಧಕ ಬಾಧಕಗಳ ಬಗ್ಗೆ ತಿಳಿ ಹೇಳುತ್ತಿದ್ದೆ. ಆಗ ಅವಳು ಸಟ್ಟನೆ ಕಣ್ಣೀರು ಹಾಕುತ್ತ 'ನಿಮ್ಮಗೆ ಗೊತ್ತಿಲ್ಲ ಮೇಡಮ್, ಅವನು ನೋಡಲು ಹಾಗೆಯೇ. ತುಂಬ ಸಭ್ಯನಾಗಿ ಕಾಣುತ್ತಾನೆ. ಆದರೆ ನಾನು ನಿಮ್ಮ ಹಸೀನ ಕತೆಯ ಹಸೀನಳಷ್ಟೇ ಯಾತನೆಯನ್ನು ಅನುಭವಿಸಿದ್ದೇನೆ' ಎಂದು ಸೋದಾಹರಣೆಯೊಡನೆ ವಿವರಿಸಿದಳು. ಇವೆರಡು ಕೂಡ ಅತ್ಯಂತ ಮುನುಷ್ಯತ್ವದ ಮಾನವೀಯ ಪ್ರತಿಕ್ರಿಯೆಗಳು.

ಬರಹಗಾರರಿಗೆ ಬಾಲ್ಯದ ಅನುಭವಗಳು ಅಪೂರ್ವ ಗಣಿ ಇದ್ದಂತೆ ಎಂದೆನ್ನುತ್ತಾರೆ. ಕನ್ನಡದ ಕತೆಗಾರರು ತಾವು ಕಂಡುಂಡ ಬಾಲ್ಯದ ಪರಿಸರದ ಮರುಸೃಷ್ಟಿಯಲ್ಲಿ ನಿರತರಾಗಿದ್ದಾರೆ ಎಂಬುದು ನಿಜವಾದರೂ ಅದು ಸಂಪೂರ್ಣ ಸತ್ಯವಲ್ಲ. ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣದ ಎಲ್ಲಾ ಸಕಾರತ್ಮಕ ಮತ್ತು ನಕಾರತ್ಮಕ ಪರಿಣಾಮಗಳ ದೆಸೆಯಿಂದ ಕನ್ನಡಿಗರು ಇಂದು ವಿಶ್ವದ ಎಲ್ಲೆಡೆ ಹಂಚಿಹೋಗಿದ್ದಾರೆ. ಆರಂಭದ ಕುತೂಹಲಗಳಿಂದ ಕಳಚಿಕೊಳ್ಳುತ್ತ ವಿಭಿನ್ನ ಕತೆಗಳನ್ನು ಈಗಾಗಲೇ ಕತೆಗಾರರು ನೀಡುತ್ತಿದ್ದಾರೆ. ಮತ್ತೆ ಮುಂದೆಯೂ ಈ ನಿಟ್ಟಿನಲ್ಲಿ ಹೆಚ್ಚಿನದನ್ನು ನಿರೀಕ್ಷಿಸಬಹುದಾಗಿದೆ.